# ಯಾರಿಗೆ ಮತ?

ರೂಫ್ ಎಂದೇ ಚಿಕ್ಕದಾಗಿ ಕರೆಯಲ್ಪಡುವ ರೂಫಸ್ ಒಕೇಕೆ ಆ ಊರಿನ ಜನರ ಮನಗೆದ್ದವ. ಅವನ ಜನಪ್ರಿಯತೆಯನ್ನು ಅವರು ಹೆಚ್ಚಿನ ಪದಗಳಿಂದ ವಿವರಿಸದಿದ್ದರೂ ಆತ ತನ್ನ ಇತರೆ ಸಮವಯಸ್ಕರಂತೆ ಕೆಲಸಕ್ಕಾಗಿ ಊರನ್ನು ತೊರೆಯದೆ ಆ ಹಳ್ಳಿಯಲ್ಲಿಯೆ ಉಳಿದುದ್ದಕ್ಕಾಗಿ ಕೃತಜ್ಞತೆಯನ್ನು ಆ ಪದಗಳಲ್ಲಿ ವ್ಯಕ್ತಪಡಿಸುತ್ತಾರೆ. ಹಾಗೆಂದ ಮಾತ್ರಕ್ಕೆ ಆತ ಹಳ್ಳಿಯ ಗಮಾರನೇನಲ್ಲ. ಫೋರ್ಟ್ ಹಾರ್ಕೋರ್ಟ್‌ನಲ್ಲಿ ಆತನಿಗೆ ಎರಡು ವರ್ಷಗಳ ಸೈಕಲ್ ರಿಪೇರಿಯ ತರಬೇತಿಯ ಅನುಭವವಿದೆ. ತನ್ನ ಮುಂದಿದ್ದ ಉಜ್ವಲ ಭವಿಷ್ಯವನ್ನು ಬಿಟ್ಟು ತನ್ನ ಜನರೆಡೆಗೆ ಹಿಂತಿರುಗಿದ್ದಲ್ಲದೆ ಅವರ ಕಷ್ಟಕಾಲದಲ್ಲಿ ಮಾರ್ಗದರ್ಶಕನೂ ಆಗಿದ್ದಾನೆ.

ಉಮೋಫಿಯಾ ಹಳ್ಳಿಯ ಜನಕ್ಕೆ ಅಷ್ಟೊಂದು ಮಾರ್ಗದರ್ಶನದ ಅಗತ್ಯವೂ ಇಲ್ಲ. ಇಡೀ ಹಳ್ಳಿ ಸಾಮೂಹಿಕವಾಗಿ ಪೀಪಲ್ ಅಲೈಯನ್ಸ್ ಪಾರ್ಟಿಗೆ ಸೇರಿದ್ದಾಗಿದೆ. ಆ ಊರಿನ ಹೆಮ್ಮೆಯ ಮಗ ಮಾರ್ಕಸ್ ಇಬೆ ಈಗ ಹೊರಹೋಗುತ್ತಿರುವ ಸರ್ಕಾರದಲ್ಲಿ ಸಂಸ್ಕೃತಿಯ